"ಕೈ ಹಾಕಿದಾಗ ಯಾರೊ ಪೋಲಿ ಅನ್ಕೊಂಡೆ. ನೀವು ಹೆಲ್ಪ್ ಮಾಡ್ಲಿಲ್ಲ ಅಂದ್ರೆ ಖಂಡಿತ ಟ್ರೇನ್ ಮಿಸ್ ಆಗ್ತಾ ಇತ್ತು, ಥ್ಯಾಂಕ್ಯೂ ಸೋ ಮಚ್" ಅಂತ ಆಕೆ ಕಿರುನಗೆ ಬೀರಿದಳು. ಆ ಬ್ಯಾಚುಲರ್ ಹೃದಯ ಹಾರ್ಟ್ ಬೀಟ್ ಒಂದನ್ನು ಮಿಸ್ ಮಾಡ್ಕೊಳ್ತು. "ನಾನಿವತ್ತು ಹೋಗೋದು ಬಹಳ ಇಂಪಾರ್ಟೆಂಟ್ ಇತ್ತು, ಮಿಸ್ ಮಾಡ್ಕೊಂಡಿದ್ರೆ ದೇವರೇ ಗತಿ..." ಅವಳು ಮಾತಾಡುತ್ತಲೇ ಇದ್ದಳು, ಇವನು ತನ್ನ ಭಾವಲೋಕಲ್ಲಿ ತೇಲುತ್ತಿದ್ದ.

ಕಾರವಾರಕ್ಕೆ ಹೋಗುವ ಈ ರೈಲಿನ ಕೊನೆಯ ಕೆಲವು ಬೋಗಿಗಳು ಮಂಗಳೂರಿನಲ್ಲಿ ಬೇರೆಯಾಗಿ, ಮತ್ತೊಂದು ಎಂಜಿನ್ ಮೂಲಕ ಕೇರಳ ತಲುಪುತ್ತದೆ. ಇವರು ಬುಕ್ ಮಾಡಿರೋ ಟಿಕೆಟ್ ಕಾರವಾರದ ರೈಲಿಗೆ, ಹತ್ತಿರುವುದು ಕೇರಳದ ಬೋಗಿಗೆ.

"ನಾನೂ ಕುಕ್ಕೆ ಸುಬ್ರಮಣ್ಯಕ್ಕೆ ಹೋಗೋಕೆ ಏಸಿ ಬುಕ್ ಮಾಡಿದ್ದೆ" ಎಂದಳು. "ಸರಿ ಬನ್ನಿ, ಹಾಗೆ ಕೊನೆಯವರೆಗೂ ಹೋಗೋಣ, ಮುಂದೆ ಕೆಂಗೇರಿಯಲ್ಲಿ ರೈಲು ನಿಂತಾಗ ಬೋಗಿ ಬದಲಾಯಿಸಿಕೊಳ್ಳೋಣ" ಎಂದ ಹರೀಶ್. ಸರಿ ಅತ್ತಿತ್ತ ಕುಳಿತಿದ್ದ ಜನರ ಲಗೇಜ್ ದಾಟುತ್ತಾ ಕೆಂಗೇರಿ ಬಂತು ಎನ್ನುವಷ್ಟರಲ್ಲಿ ಕೊನೆ ತಲುಪಿದರು. "ನಿಮಗೆ ಲಗೇಜ್ ತೊಗೊಂಡು ಹತ್ತೋದು ಕಷ್ಟ, ನಾ ತೊಗೊಂಡು ಬರ್ತೀನಿ, ನೀವು ಹೋಗಿ ಬೇಗ ಹತ್ತಿ, ಜಾಸ್ತಿ ಟೈಮ್ ನಿಲ್ಲಲ್ಲ ರೈಲು" ಎಂದ. ಸರ್ರನೆ ಇಬ್ಬರೂ ಇಳಿದರು. ಆಕೆ ಬಿರಬಿರನೆ ಮಂಗಳೂರಿನ ಬೋಗಿ ಹತ್ತಿದಳು, ಎರಡನೇ ಲಗೇಜ್ ಆಕೆಗೆ ಕೊಡುವಷ್ಟರಲ್ಲಿ ರೈಲು ಹೊರಟೇ ಬಿಟ್ಟಿತು.

ಆ ಗಡಿಬಿಡಿಯಲ್ಲಿ ಬಾಗಿಲಿನ ಕಂಬಿ ಹಿಡಿದು ಹತ್ತುವಷ್ಟರಲ್ಲಿ ಹರೀಶನ ಕಾಲು ಜಾರಿ, ಪ್ಲಾಟ್‌ಫಾರಂಗೆ ಕಾಲು ಉಜ್ಜಲಾರಂಭಿಸಿತು. ಆಕೆ ತಕ್ಷಣ ಲಗೇಜ್ ಕೈ ಬಿಟ್ಟು ಆತನನ್ನು ಹಿಡಿದು ಮೇಲೆತ್ತಿದಳು. ಎತ್ತರವಾಗಿದ್ದು ಬಲಿಷ್ಠಳಾಗಿದ್ದ ಆಕೆಯಿಂದಾಗಿ ಹರೀಶ್ ಸ್ವಲ್ಪದರಲ್ಲೆ ಸಾವಿನಿಂದ ಪಾರಾದ.

"ನನ್ನ ಪ್ರಾಣ ಉಳಿಸಿದ ನಿಮಗೆ ಎಷ್ಟು ಥ್ಯಾಂಕ್ಸ್ ಹೇಳಿದ್ರೂ ಕಮ್ಮೀನೇ" ಎಂದ. "ನಿಮ್ಮ ಕಾಲಲ್ಲಿ ರಕ್ತ ಬರ್ತಾ ಇದೆ ನೋಡ್ಕೊಳ್ಳಿ" ಅಂದಳು. ಹರೀಶ್ ಅವಳ ಕಾಳಜಿ ನೋಡಿ ಇನ್ನಷ್ಟು ಸೋಲಲಾರಂಭಿಸಿದ. ಒಂದು ರೀತಿಯ ತೊಳಲಾಟ ಪ್ರಾರಂಭವಾಯಿತು. ಇನ್ನೇನು ಅವಳ ಮುಖ ನೋಡಿ ಒಂದು ಮುದ್ದಾದ ನಗು ಬೀರಬೇಕು "ಹಾ!" ಎಂದ ಹರೀಶ್‌ಗೆ ಮೈಯಲ್ಲಿ ಶಾಕ್ ಹೊಡೆದಂತೆ ಆಯಿತು. ಅದು ಪ್ರೇಮದ ಪುಳಕ ಅಲ್ಲ, ಕಾಲಲ್ಲಿ ಆಗಿದ್ದ ತರಚಿದ ಗಾಯದ ಚಳಕು. ಅವನನ್ನು ಒಂದು ಸೀಟಿನ ಮೇಲೆ ಕೂರಿಸಿ ತನ್ನ ಬ್ಯಾಗ್‌ನಿಂದ ಫಸ್ಟ್ ಏಡ್ ಕಿಟ್ ತೆರೆದಳು. ಮತ್ತೊಮ್ಮೆ ಅವನ ಮನಸ್ಸು ಅವಳೆಡೆಗೆ ಜಾರಿತು, ಅವಳನ್ನೇ ದಿಟ್ಟಿಸಿದ. ಆಕೆ ಗಾಯದ ಆರೈಕೆ ಮಾಡಿದಳು. ಇದ್ದಕ್ಕಿದ್ದಂತೆ ಆಕೆ ಗಾಯಕ್ಕೆ ಹಾಕಿದ ಸ್ಪಿರಿಟ್‌ನ ಉರಿಯಿಂದಾಗಿ "ಅಮ್ಮಾ!" ಎಂದು ಚೀರಿ ಭ್ರಮಾಲೋಕದಿಂದ ಹೊರಗೆ ಬಂದ. "ಏನ್ರೀ ನೀವು ಡಾಕ್ಟ್ರಾ" ಅಂದ. "ಇಲ್ಲಾ ನರ್ಸು" ಎಂದು ಒಳಗೇ ನಕ್ಕಳು. ಅಷ್ಟರಲ್ಲಿ "ಇದು ನನ್ನ ಸೀಟು" ಅಂತ ಒಂದು ಧ್ವನಿ ಕೇಳಿಸಿತು. "ನಡೀರಿ ನಮ್ಮ ಸೀಟ್ಗೆ ಹೋಗೋಣ" ಅಂತ ಇಬ್ಬರೂ ಹೊರಟರು. ಮಳೆಯಿಂದಾಗಿ ಬಹುತೇಕ ರೈಲು ಖಾಲಿ. ಹಾಗಾಗಿ ಎದುರು ಬದುರು ಬರ್ತ್‌ನಲ್ಲಿ ಕೂತು ಮಾತು ಆರಂಭಿಸಿದರು. ಇವನ ಮಾತು, ಕಾಳಜಿಯಿಂದ ಅವಳ ಮನಸ್ಸಿನಲ್ಲೂ ಪ್ರೀತಿಯ ಬೀಜ ಮೊಳಕೆ ಒಡೆಯಿತು.

"ನಂಗೆ ಚಾಯಾ ಕೊಡೋ ಖುಷಿ ಯಾರೂ ಕೊಡಲ್ಲ" ಎಂದ. ತಕ್ಷಣ "ಚಾಯಾ? ಹೆಂಡತೀನಾ?" ಅಂತ ಗಾಬರಿ ಮತ್ತು ತಳಮಳದಿಂದ ಕೇಳಿದಳು. "ಯಾಕ್ರೀ ಗಾಬರಿ, ಬರ್ತಾ ಇದ್ದಾಳೆ ನೋಡಿ" ಬೆರಳು ತೋರಿದ "ಚಾಯಾ... ಚಾಯಾ... ಗರಂ ಟೀ ಚಾಯಾ ಚಾಯಾ" ಅದನ್ನು ಕಂಡ ಅವಳು "ಅಬ್ಬಾ!" ಅಂದಳು. "ಯಾಕ್ರೀ?" ಅಂದ. "ನನಗೆ ನಿಮ್ಮ ಸೆನ್ಸ್ ಆಫ್ ಹ್ಯೂಮರ್ ತುಂಬಾ ಇಷ್ಟ